ICAR - CENTRAL INSTITUTE FOR COTTON RESEARCH
(Indian Council of Agricultural Research)
Regional Station, Coimbatore-641 003
WALK - IN - INTERVIEW
Walk In Interview is scheduled for the selection of temporary position of Senior Research Fellow on 12th June, 2025. For details please visit our website www.cicr.org.in

Indian Express Pg.16

ಕೃಷಿ ವಿ.ವಿ, ತೋಟಗಾರಿಕೆ ವಿ.ವಿ ಹಾಗೂ ಪಶು ವೈದ್ಯಕೀಯ ವಿ.ವಿ ವಿಲೀನ ಪ್ರಕ್ರಿಯೆ

ರಾಜ್ಯದ ಏಕೈಕ ಪಶು ವಿವಿಗೆ ಕುತ್ತು

• ಶಶಿಕಾಂತ ಎಸ್. ಶೆಂಬೆಳ್ಳಿ

ಬೀದರ್: ಪ್ರಾದೇಶಿಕ ಅಸಮತೋಲನ ನಿವಾರಣೆಯ ಉದ್ದೇಶದಿಂದ ಸ್ಥಾಪನೆಗೊಂಡಿರುವ ಇಲ್ಲಿನ ಕರ್ನಾಟಕ ಪಶು ವೈದ್ಯಕೀಯ, ಪಶುಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ರಾಜ್ಯದ ಇತರೆ ವಿಶ್ವವಿದ್ಯಾಲಯಗಳೊಂದಿಗೆ ವಿಲೀನಗೊಳಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ರಾಯಚೂರಿನ ಕೃಷಿ ವಿವಿ ಮತ್ತು ಬಾಗಲಕೋಟೆಯ ತೋಟಗಾರಿಕೆ ವಿವಿಯೊಂದಿಗೆ ಪಶು ವಿವಿಯನ್ನು ವಿಲೀನಗೊಳಿಸಲು ಉದ್ದೇಶಿಸಲಾಗಿದೆ. ವಿಲೀನ ಪ್ರಕ್ರಿಯೆಗಾಗಿ ರಾಜ್ಯ ಸರ್ಕಾರವು ಟಿ.ಎಂ. ವಿಜಯಭಾಸ್ಕರ್ ಅಧ್ಯಕ್ಷತೆಯ ಏಳರ ಕೃಷಿ, ತೋಟಗಾರಿಕೆ ಹಾಗೂ ಪಶು ವೈದ್ಯಕೀಯ ವಿಶ್ವವಿದ್ಯಾಲಯ ಪುನರ್ ಸಂಘಟನೆ ಉನ್ನತಾಧಿಕಾರ ಸಮಿತಿ ರಚಿಸಿದೆ.


ಈ ಸಮಿತಿಯು ಈಗಾಗಲೇ ಇದರ ಸಾಧಕ-ಬಾಧಕಗಳ ಕುರಿತು ಅಧ್ಯಯನ ಆರಂಭಿಸಿದೆ. ಸಮಿತಿಯ ಸದಸ್ಯರು ನಗರದ ಪಶು ವೈದ್ಯಕೀಯ ವಿಶ್ವವಿದ್ಯಾಲಯಕ್ಕೆ ಭೇಟಿ ಕೊಟ್ಟು, ವಿವಿ ಕುಲಪತಿ ಹಾಗೂ ಸಿಬ್ಬಂದಿಯೊಂದಿಗೆ ಚರ್ಚಿಸಿದ್ದಾರೆ. ಯಾವ ವಿಷಯಗಳ ಕುರಿತು ಚರ್ಚೆ ನಡೆದಿದೆ ಎಂಬುದರ ವಿವರ ಹಂಚಿಕೊಳ್ಳಲು ವಿವಿ ಆಡಳಿತ ಮಂಡಳಿ ನಿರಾಕರಿಸಿದೆ.

ಆದರೆ, ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಹಂಚಿಕೆಯಾಗುತ್ತಿರುವ ಅನುದಾನ, ಕಾಯಂ ಹಾಗೂ ಹೊರಗುತ್ತಿಗೆ ನೌಕರರು, ಆದಾಯ, ವಿಲೀನದ ಕುರಿತ ಅಭಿಪ್ರಾಯಗಳು ಸೇರಿದಂತೆ ಹಲವು ವಿಷಯಗಳ ಕುರಿತು ಮಾಹಿತಿ ಕಲೆ ಹಾಕಿದೆ ಎಂದು ಖಚಿತ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಪ್ರಾದೇಶಿಕ ಅಸಮಾನತೆ ನಿವಾರಣೆಗೆ ವಿವಿ: ಪ್ರಾದೇಶಿಕ ಅಸಮತೋಲನ ನಿವಾರಣೆಯ ಹಿನ್ನೆಲೆಯಲ್ಲಿ ಡಾ. ಡಿ.ಎಂ. ನಂಜುಂಡಪ್ಪ ವರದಿ ಆಧರಿಸಿ ಬೀದರ್‌ನಲ್ಲಿ ಪಶು ವೈದ್ಯಕೀಯ ವಿಶ್ವವಿದ್ಯಾಲಯ ಸ್ಥಾಪಿಸಲಾಗಿದೆ. ರಾಜ್ಯದ ಉತ್ತರ ಹಾಗೂ ದಕ್ಷಿಣದ ಭಾಗಗಳು ಸಮಾನವಾಗಿ ಅಭಿವೃದ್ಧಿ ಹೊಂದಬೇಕೆನ್ನುವುದು ಇದರ ಆಶಯವಾಗಿದ್ದು, 2005ರಲ್ಲಿ ವಿವಿ ಕಾರ್ಯಾರಂಭ ಮಾಡಿತು. ಒಂದುವೇಳೆ ಇದನ್ನು ಅನ್ಯ ವಿಶ್ವವಿದ್ಯಾಲಯಗಳಲ್ಲಿ ವಿಲೀನಗೊಳಿಸಿದರೆ ಇದರ ಅಸ್ತಿತ್ವ ಕೊನೆಗಾಣಲಿದೆ. ಇದರ ಉದ್ದೇಶಕ್ಕೂ ಕೊಡಲಿ ಏಟು ಬೀಳಲಿದೆ ಎನ್ನುವುದು ತಜ್ಞರು ಹಾಗೂ ವಿವಿ ಸಿಬ್ಬಂದಿಯ ವಾದ.

ಹೈನುಗಾರಿಕೆ, ಮೀನುಗಾರಿಕೆ, ದೇಶಿ ತಳಿಗಳ ಸಂವರ್ಧನೆ, ಜಾನುವಾರುಗಳ ಹಲವಾರು ರೋಗಗಳಿಗೆ ಸಂಬಂಧಿಸಿದಂತೆ ಲಸಿಕೆ ಅಭಿವೃದ್ಧಿ ಸೇರಿದಂತೆ ಅನೇಕ ಆವಿಷ್ಕಾರಗಳು, ಕೆಲಸಗಳು ಪಶು ವಿವಿಯಲ್ಲಿ ನಡೆಯುತ್ತಿವೆ. ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಪದವಿ, ಪಿಎಚ್‌ಡಿ ಸೇರಿದಂತೆ ಹಲವು ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ. ಇದರ ಅಡಿಯಲ್ಲಿ ಬೀದರ್, ಬೆಂಗಳೂರು, ಶಿವಮೊಗ್ಗ, ಹಾಸನ, ಅಥಣಿ, ಪುತ್ತೂರು ಹಾಗೂ ಗದಗದಲ್ಲಿ ಕಾಲೇಜುಗಳು ಕೆಲಸ ನಿರ್ವಹಿಸುತ್ತಿವೆ. ಶುಲ್ಕ, ಲಸಿಕೆ ಸೇರಿದಂತೆ ಇತರ ಮೂಲಗಳಿಂದ ಆದಾಯ ಬರುತ್ತಿದ್ದು, ಸ್ವಾವಲಂಬಿಯಾಗಿ ಮುನ್ನಡೆಯುತ್ತಿದೆ. ಆದರೂ ಸರ್ಕಾರ ವಕ್ರದೃಷ್ಟಿ ಬೀರಿರುವುದಕ್ಕೆ ತೀವ್ರ ವಿರೋಧ ವ್ಯಕ್ತವಾಗಿದೆ. ಸ್ಥಳೀಯರು ಹೋರಾಟದ ಎಚ್ಚರಿಕೆ ನೀಡಿದ್ದಾರೆ.

ವಿಲೀನ ಸರಿಯಲ್ಲ



2021ರಲ್ಲಿ ರಾಜ್ಯ ಸರ್ಕಾರವು ಶಿವಮೊಗ್ಗದಲ್ಲಿ ಇನ್ನೊಂದು ಪಶು ವೈದ್ಯಕೀಯ ವಿಶ್ವವಿದ್ಯಾಲಯ ಸ್ಥಾಪಿಸಲು ಮುಂದಾಗಿತ್ತು. ಇದರ ಮಹತ್ವ ಇಷ್ಟಿರುವಾಗ ಬೀದರ್ ಪಶು ವಿವಿ ವಿಲೀನಕ್ಕೆ ಮುಂದಾಗಿರುವುದು ಸರಿಯಲ್ಲ.

ವೀರಭದ್ರಪ್ಪ ಉಪ್ಪಿನ, ಸದಸ್ಯ, ಅಖಿಲ ಭಾರತೀಯ ವಿಶ್ವವಿದ್ಯಾಲಯಗಳ ನೌಕರರ ಒಕ್ಕೂಟದ ರಾಷ್ಟ್ರೀಯ ಕಾರ್ಯಕಾರಿ ಸಮಿತಿ

ದೊಡ್ಡ ಅನ್ಯಾಯ



ಹಿಂದುಳಿದ ಪ್ರದೇಶ ಎಂಬ ಕಾರಣಕ್ಕೆ ಸರ್ಕಾರ ಈ ಭಾಗಕ್ಕೆ ವಿಶ್ವವಿದ್ಯಾಲಯ ಕೊಟ್ಟಿದೆ. ಈಗ ಕಸಿದುಕೊಂಡರೆ ಅದಕ್ಕೆ ಅರ್ಥವೇ ಇರುವುದಿಲ್ಲ. ಹಾಗೆ ಮಾಡಿದರೆ ಈ ಭಾಗಕ್ಕೆ ದೊಡ್ಡ ಅನ್ಯಾಯವಾಗಲಿದೆ.

ಶಿವಯ್ಯ ಸ್ವಾಮಿ, ಸದಸ್ಯ, ಕೇಂದ್ರ ಸರ್ಕಾರದ ರಾಜ್ಯ ಅಭಿವೃದ್ಧಿ ಸಮನ್ವಯ ಹಾಗೂ ಮೇಲುಸ್ತುವಾರಿ ಸಮಿತಿ

ಮಾಹಿತಿ ವಿನಿಮಯ



ಕೃಷಿ, ತೋಟಗಾರಿಕೆ ಹಾಗೂ ಪಶು ವೈದ್ಯಕೀಯ ವಿಶ್ವವಿದ್ಯಾಲಯ ಪುನರ್ ಸಂಘಟನೆ ಉನ್ನತಾಧಿಕಾರ ಸಮಿತಿ ನಮ್ಮ ವಿಶ್ವವಿದ್ಯಾಲಯಕ್ಕೆ ಭೇಟಿ ಕೊಟ್ಟಿದೆ. ವಿವಿಗೆ ಸಂಬಂಧಿಸಿದಂತೆ ಕೇಳಿದ ಮಾಹಿತಿ ನೀಡಲಾಗಿದೆ.

ಪ್ರೊ.ಕೆ.ಸಿ. ವೀರಣ್ಣ, ಕುಲಪತಿ, ಪಶು ವೈದ್ಯಕೀಯ ವಿವಿ



ಬೀದರ್‌ನ ಕರ್ನಾಟಕ ರಾಜ್ಯ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ

ವಿಲೀನಗೊಳಿಸುವುದೇಕೆ?

'ಪಶು ವೈದ್ಯಕೀಯ ವಿವಿ 20 ವರ್ಷಗಳಲ್ಲಿ ಗಮನಾರ್ಹ ಸಾಧನೆ ಮಾಡಿದೆ. 10 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿವಿಧ ಪ್ರಕಾರದ ಪದವಿ ಪಡೆದು ನೌಕರಿ ಸೇರಿದ್ದಾರೆ. ವಿವಿ ಆರಂಭಗೊಂಡಾಗ ಹತ್ತು ಸಂಸ್ಥೆಗಳಿದ್ದವು. ಈಗ ಅವುಗಳ ಸಂಖ್ಯೆ 35ಕ್ಕೆ ಏರಿದೆ. ವಿವಿ ಕೆಲಸದಿಂದ ಪಶುಪಾಲನಾ ಸಾಮರ್ಥ್ಯ ಶೇ 20ರಿಂದ ಶೇ 30ಕ್ಕೆ ಹೆಚ್ಚಾಗಿದೆ. ಹೊಸ ತಳಿ, ಲಸಿಕೆ ಸೇರಿದಂತೆ ಅನೇಕ ಗಮನಾರ್ಹ ಕೆಲಸಗಳಾದಾಗ ವಿಲೀನಗೊಳಿಸುವುದೇಕೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ವಿವಿಯ ಹಿರಿಯ ವಿಜ್ಞಾನಿಗಳು ಪ್ರಶ್ನಿಸಿದ್ದಾರೆ.

'ವಿವಿ ಶ್ರಮದಿಂದ ಮುಧೋಳ ತಳಿಯ ನಾಯಿ ಭಾರತೀಯ ಸೇನೆಗೆ ಸೇರ್ಪಡೆಯಾಗಿದೆ. ಮುಧೋಳನಲ್ಲಿ ಶ್ವಾನ ಸಂಶೋಧನಾ ಸಂಸ್ಥೆ ಸಹ ಆರಂಭಿಸಲಾಗಿದೆ. ವಿಜಯಪುರದಲ್ಲಿ ಮೀನುಗಾರಿಕೆ ಸಂಸ್ಥೆ ಆರಂಭಿಸಲಾಗಿದ್ದು, ಇದರಿಂದ ಉತ್ತರದಲ್ಲಿ ಮೀನುಗಾರಿಕೆ ಚಟುವಟಿಕೆಗಳಿಗೆ ಉತ್ತೇಜನ ಸಿಕ್ಕಿದೆ. ದಕ್ಷಿಣದ ಪ್ರಭಾವಿಗಳ ಲಾಬಿಗೆ ಒಳಗಾಗಿ ಅನ್ಯ ವಿವಿಯೊಂದಿಗೆ ವಿಲೀನಗೊಳಿಸಿದರೆ ವಿವಿ ಸ್ಥಾಪಿಸಿದ ಉದ್ದೇಶ ಈಡೇರದು. ಇತರೆ ವಿವಿಗಳ ಮೇಲೂ ಇದರ ಪರಿಣಾಮ ಉಂಟಾಗಲಿದೆ' ಎಂದಿದ್ದಾರೆ.

Prajavani Pg.05

Prajavani Pg.10

ಬೆಳಗನಹಳ್ಳಿಯಲ್ಲಿ ಬೆಳೆದ ಮೆಕ್ಕೆಜೋಳ ಕೇರಳದ ರಾಸುಗಳಿಗೆ ಮೇವು

ಬಲಿಯದ ಮೆಕ್ಕೆಜೋಳ ಕೇರಳಕ್ಕೆ

• ರವಿಕುಮಾರ್

ಹಂಪಾಪುರ (ಮೈಸೂರು ಜಿಲ್ಲೆ): ಎಚ್. ಡಿ. ಕೋಟೆ ತಾಲ್ಲೂಕಿನಲ್ಲಿ ತಂಬಾಕು ಮತ್ತು ಹತ್ತಿಗೆ ಪರ್ಯಾಯವಾಗಿ ರೈತರು ಮೆಕ್ಕೆಜೋಳವನ್ನು ಬೆಳೆಯುತ್ತಿದ್ದು, ಬಲಿಯದ ಬೆಳೆಯನ್ನು ಮೇವಿನ ರೂಪದಲ್ಲಿ ನೆರೆಯ ಕೇರಳಕ್ಕೆ ಮಾರಾಟ ಮಾಡುವ ಮೂಲಕ ಉತ್ತಮ ಆದಾಯ ಗಳಿಸುತ್ತಿದ್ದಾರೆ.

ತಾಲ್ಲೂಕಿನ ಬೆಳಗನಹಳ್ಳಿ, ಹೊಸತೊರವಳ್ಳಿ, ಹಾರೋಪುರ, ಕೊಡಸೀಗೆ, ಮಗ್ಗೆ, ಅಂತರಸಂತೆ, ಹೆಗ್ಗನೂರು, ಮಾದಾಪುರ, ಚಿಕ್ಕೆರೆಯೂರು, ಹೊಸಹೊಳಲು ಪ್ರದೇಶದಲ್ಲಿ ಮೆಕ್ಕೆಜೋಳ ಬೆಳೆಯಲಾಗಿದೆ. ಬೆಳೆ ಬಲಿತು ಕಟಾವಿಗೆ ಬರಲು ಮೂರೂವರೆ ತಿಂಗಳು ಬೇಕು. ಆದರೆ ರೈತರು ಎರಡೂವರೆ ತಿಂಗಳ ಬೆಳೆಯನ್ನು ಕಟಾವು ಮಾಡಿ, ತೂಕದ ಲೆಕ್ಕದಲ್ಲಿ ಮಾರುತ್ತಿದ್ದಾರೆ. ಒಂದು ಟನ್ ಜೋಳಕ್ಕೆ ₹1,900ರಿಂದ ₹2,500 ಪಡೆಯುತ್ತಿದ್ದಾರೆ.

'ಒಂದು ಎಕರೆಯಲ್ಲಿ ಬೆಳೆಯಲು ₹8 ಸಾವಿರದವರೆಗೆ ಖರ್ಚಾಗುತ್ತದೆ. 19ರಿಂದ 20 ಟನ್ ಮೇವಿನ ಕಡ್ಡಿ ದೊರೆಯುತ್ತಿದ್ದು, ₹40 ಸಾವಿರದಿಂದ ₹45 ಸಾವಿರಕ್ಕೆ ಮಾರಾಟವಾಗುತ್ತಿದೆ. ಖರ್ಚು ಕಳೆದು ₹30 ಸಾವಿರದಿಂದ ₹35 ಸಾವಿರದವರೆಗೆ ಲಾಭ ದೊರೆಯುತ್ತಿದೆ' ಎನ್ನುತ್ತಾರೆ ಬೆಳಗನಹಳ್ಳಿ ರೈತರು.

'ಮೆಕ್ಕೆಜೋಳವನ್ನು ಪೂರ್ಣ ಪ್ರಮಾಣದಲ್ಲಿ ಬೆಳೆದು, ಕಟಾವು ಮಾಡಿ, ಜೋಳ ಬಿಡಿಸಿ ಮಾರುವವರೆಗೆ ಖರ್ಚು ಹೆಚ್ಚು. ಎಕರೆಗೆ 15 ರಿಂದ 16 ಕ್ವಿಂಟಲ್ ಇಳುವರಿ ಸಿಗುತ್ತದೆ. ಕ್ವಿಂಟಲ್‌ಗೆ ₹1,200 ದರವಿದ್ದು, ಎಕರೆಗೆ ₹17 ಸಾವಿರದವರೆಗೆ ದೊರೆಯುತ್ತದೆ.



ಬೆಳಗನಹಳ್ಳಿಯಲ್ಲಿ ಬಲಿಯದ ಮೆಕ್ಕೆಜೋಳವನ್ನು ಮೇವಿಗಾಗಿ ಕಟಾವು ಮಾಡಲಾಗಿದೆ

ಕಟಾವು ಮುಗಿಸುವವರೆಗೆ ₹15 ಸಾವಿರ ಖರ್ಚಾಗುತ್ತದೆ. ಹಾಗಾಗಿ, ಜೋಳದ ಕಡ್ಡಿ ಮಾರಿದರೆ ಲಾಭ ಗಳಿಸಬಹುದು' ಎನ್ನುತ್ತಾರೆ ಕೊಡಸೀಗೆ ಗ್ರಾಮದ ರೈತ ನಂಜುಂಡ. 'ಕೇರಳದ ಮಾನಂದವಾಡಿ ಹಾಗೂ ವಯನಾಡ್‌ನ ಪಟ್ಟಣ ಮತ್ತು ನಗರ ಪ್ರದೇಶಗಳ ಮನೆಗಳಲ್ಲಿ ಹಾಲಿಗಾಗಿ ಹಸುಗಳನ್ನು ಸಾಕಿರುವವರು ಮೇವಿಗಾಗಿ ಪರದಾಡುತ್ತಿದ್ದಾರೆ. ಹೀಗಾಗಿ ಜೋಳದ ಕಡ್ಡಿಗಳನ್ನು ಖರೀದಿಸಿ, ಕಂತೆ ಲೆಕ್ಕದಲ್ಲಿ ಮಾರುತ್ತಿದ್ದೇವೆ. ನಮಗೂ ಲಾಭವಿದೆ' ಎನ್ನುತ್ತಾರೆ ಮಾನಂದವಾಡಿಯ ಗೂಡ್ಸ್ ವಾಹನ ಮಾಲೀಕ ಮನೀಶ್.

Vishwavani Pg.11

ಶಿಲೀಂಧ್ರ ಕಳ್ಳಸಾಗಣೆ ಮಾಡಿದ್ದ ಇಬ್ಬರು ಚೀನಿಯರ ಸೆರೆ | ಮಿಚಿಗನ್ ವಿವಿ ಸಂಶೋಧಕಿ, ಜತೆಗಾರ ಎಫ್‌ಬಿಐ ವಶಕ್ಕೆ | ಭತ್ತ, ಗೋಧಿ, ಬಾರ್ಲಿ ಧಾನ್ಯ ಸಮಗ್ರ ಕೃಷಿ ನಾಶ ಸಂಚು | ಸಂಶೋಧಕಿ ಜಿಯಾನ್ ಚೀನಾ ಕಮ್ಯುನಿಸ್ಟ್ ಪಕ್ಷಕ್ಕೆ ನಿಷ್ಠಳು

ಅಮೆರಿಕ ಆಹಾರ ಕೃಷಿ ನಾಶಕ್ಕೆ ಚೀನಾ ಸಂಚು

ವಾಷಿಂಗ್ಟನ್: ಕೃಷಿ ಬೆಳೆಗಳನ್ನು ನಾಶಪಡಿಸಬಹುದಾದ ಅಪಾಯಕಾರಿ ಶಿಲೀಂಧ್ರವನ್ನು ಕಳ್ಳಸಾಗಣೆ ಮಾಡಿದ ಆರೋಪದಡಿ ಚೀನಾದ ಇಬ್ಬರು ವ್ಯಕ್ತಿಗಳನ್ನು ಅಮೆರಿಕದ ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್(ಎಫ್‌ಬಿಐ) ಅಧಿಕಾರಿಗಳು ಮಂಗಳವಾರ ಬಂಧಿಸಿದ್ದಾರೆ.



ಚೀನಾ ಮೂಲದ ಇಬ್ಬರು ಸಂಶೋಧಕರನ್ನು ಬಂಧಿಸಿರುವುದನ್ನು ದೃಢಪಡಿಸಿ ಎಫ್‌ಬಿಐ ನಿರ್ದೇಶಕ ಕಾಶ್ ಪಟೇಲ್ 'ಎಕ್ಸ್' ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಚೀನಾ ಮೂಲದ ಮಹಿಳೆ, ಮಿಚಿಗನ್ ವಿಶ್ವವಿದ್ಯಾಲಯದ ಸಂಶೋಧಕಿ ಯುನ್ಕಿಂಗ್ ಜಿಯಾನ್ (33) ಮತ್ತು ಆಕೆಯ ಸಂಗಾತಿ ಝುನ್‌ಯಾಂಗ್ ಲಿಯು(34) ಬಂಧಿತರು. ಸಂಶೋಧಕಿ ಯುನ್ಕಿಂಗ್ ಜಿಯಾನ್, ಸಂಗಾತಿ ಲಿಯು ನೆರವು ಪಡೆದುಕೊಂಡು ಚೀನಾದಿಂದ 'ಫ್ಯುಸಾರಿಯುಮ್ ಗ್ರಾಮಿನಿಯರುಮ್' ಎಂಬ ಅಪಾಯಕಾರಿ ಶಿಲೀಂಧ್ರವನ್ನು ಕಳ್ಳಮಾರ್ಗದಲ್ಲಿ ಅಮೆರಿಕಕ್ಕೆ ತಂದು ತಾನು ಕೆಲಸ ಮಾಡುವ ಮಿಚಿಗನ್ ವಿಶ್ವವಿದ್ಯಾಲಯಕ್ಕೆ ಕೊಂಡೊಯ್ದು ಸಿಕ್ಕಿಬಿದ್ದಿದ್ದಾಳೆ.

ಚೀನಾ ಕಮ್ಯುನಿಸ್ಟ್ ಪಕ್ಷಕ್ಕೆ(ಸಿಸಿಪಿಗೆ) ಬಹಳ ನಿಷ್ಠಳಾಗಿರುವುದಾಗಿ ಆರೋಪಿ ಸಂಶೋಧಕಿ ಜಿಯಾನ್ ಒಪ್ಪಿಕೊಂಡಿದ್ದಾಳೆ. ಅಲ್ಲದೇ, ಚೀನಾ ಸರಕಾರದಿಂದ ಆಕೆ ದೊಡ್ಡ ಮೊತ್ತದ ಹಣ ಪಡೆದಿರುವುದಕ್ಕೂ ಪುರಾವೆಗಳು ಸಿಕ್ಕಿವೆ. ಜಿಯಾನ್ ಗೆಳೆಯ ಜುನ್ಯೊಂಗ್ ಲಿಯು ಇದೇ ರೋಗಕಾರಕ ಶಿಲೀಂಧ್ರದ ಬಗ್ಗೆ ಚೀನೀ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ನಡೆಸುತ್ತಿದ್ದಾನೆ. ಅಲ್ಲಿಂದ ಆಹಾರ ಧಾನ್ಯ ಬೆಳೆಗಳಿಗೆ ಭಾರೀ ಪ್ರಮಾಣದಲ್ಲಿ ಹಾನಿ ಉಂಟು ಮಾಡುವ ಶಿಲೀಂಧ್ರದ ಅಂಶಗಳನ್ನು ಡೆಟ್ರಾಯಿಟ್ ಮೆಟ್ರೋ ಪಾಲಿಟನ್ ವಿಮಾನ ನಿಲ್ದಾಣದ ಮೂಲಕ ಅಮೆರಿಕಕ್ಕೆ ಕಳ್ಳಸಾಗಣೆ ಮಾಡಿದ್ದಾನೆ. ಎಫ್‌ಬಿಐ ಅಧಿಕಾರಿಗಳಿಗೆ ಸಿಕ್ಕಿಬಿದ್ದ ಬಳಿಕ ತಪ್ಪು ಒಪ್ಪಿಕೊಂಡಿದ್ದಾನೆ.

ಇಬ್ಬರೂ ಚೀನಾ ಪ್ರಜೆಗಳ ಮೇಲೆ ಅಪಾಯಕಾರಿ ಶಿಲೀಂಧ್ರದ ಕಳ್ಳಸಾಗಣೆ, ಅಮೆರಿಕದಲ್ಲಿನ ಕೃಷಿ ಕ್ಷೇತ್ರದ ವಿನಾಶಕ್ಕೆ ಸಂಚು, ಸುಳ್ಳು ಹೇಳಿಕೆಗಳು ಮತ್ತು ವೀಸಾ ವಂಚನೆ ಆರೋಪ ಹೊರಿಸಲಾಗಿದೆ ಎಂದು ಮಿಚಿಗನ್ ಪೂರ್ವ ಜಿಲ್ಲೆಯ ಅಟಾರ್ನಿ ಜನರಲ್ ಕಚೇರಿ ತಿಳಿಸಿದೆ. ಸದ್ಯ ಇಬ್ಬರೂ ಆರೋಪಿ ಸಂಶೋಧಕರು ಫೆಡರಲ್ ಪೊಲೀಸರ ಕಸ್ಟಡಿಯಲ್ಲಿದ್ದಾರೆ. ತನಿಖೆ ಮುಂದುವರಿದಿದೆ. ಆರೋಪ ಸಾಬೀತಾದರೆ ಇಬ್ಬರಿಗೂ ಕಠಿಣ ಶಿಕ್ಷೆಯಾಗಲಿದೆ ಎಂದು ಅಟಾರ್ನಿ ಜನರಲ್ ಜೆರೋಮ್ ಎಫ್.ಗೋರ್ಗನ್ ಜ್ಯೂನಿಯರ್ ಸುದ್ದಿಸಂಸ್ಥೆಗೆ ವಿವರಿಸಿದ್ದಾರೆ. ಚೀನಾ ಸರಕಾರ ಈ ಇಬ್ಬರೂ ಸಂಶೋಧಕರನ್ನು ಅಮೆರಿಕದಲ್ಲಿನ ಆಹಾರ ಉತ್ಪಾದನೆ ಕೃಷಿಕ್ಷೇತ್ರವನ್ನು ದೊಡ್ಡ ಮಟ್ಟದಲ್ಲಿ ಹಾಳುಗೆಡವಲೆಂದೇ ನಿಯೋಜಿಸಿದೆ. ಅಮೆರಿಕದ ಆರ್ಥಿಕತೆ ಮತ್ತು ಜನರ ಆರೋಗ್ಯ ಗುರಿಯಾಗಿಸಿ ಚೀನಾ ದೊಡ್ಡ ಮಟ್ಟದ ಸಂಚು ಹೂಡಿದೆ ಎನ್ನಲಾಗಿದೆ.



ಕಳ್ಳಸಾಗಣೆ ಮಾಡಲಾದ ಶಿಲೀಂಧ್ರ

ಆಹಾರ ಬೆಳೆ ಪೂರ್ಣಹಾನಿ

ಫ್ಯುಸಾರಿಯಮ್ ಗ್ರಾಮಿನೇರಮ್ ಹೆಸರಿನ ಶಿಲೀಂಧ್ರ ಗೋಧಿ, ಬಾರ್ಲಿ, ಜೋಳ ಮತ್ತು ಭತ್ತದ ಬೆಳೆಗಳಿಗೆ ಸುಲಭವಾಗಿ ತಗಲುತ್ತದೆ. ಇದು ಮುಖ್ಯವಾಗಿ ಆಹಾರ ಧಾನ್ಯ ಬೆಳೆಗಳಲ್ಲಿ ಹೆಡ್‌ಬ್ಲೈಟ್ ಎಂಬ ಸಮಸ್ಯೆಗೆ ಕಾರಣವಾಗುತ್ತದೆ. ಅಲ್ಲದೇ ಬಹಳ ಅಪಾಯಕಾರಿಯಾದ ಮೈಕೊಟಾಕ್ಸಿನ್ಸ್ ಎಂಬ ರಾಸಾಯನಿ ಕವನ್ನೂ ಉತ್ಪತ್ತಿ ಮಾಡುತ್ತದೆ. ಈ ಶಿಲೀಂಧ್ರ ತಗುಲಿದೆ ಆಹಾರ ಧಾನ್ಯಗಳ ಇಳುವರಿ ತಗ್ಗುತ್ತದೆ, ಗುಣಮಟ್ಟವೂ ಕಡಿಮೆಯಾಗುತ್ತದೆ ಎಂಬ ಮಾಹಿತಿ ಲಭ್ಯವಾಗಿದೆ.

ಜನ-ಜಾನುವಾರಿಗೆ ಕುತ್ತು

ಒಂದೊಮ್ಮೆ ಈ ಶಿಲೀಂಧ್ರ ತಗುಲಿದ ಆಹಾರ ಬೆಳೆಯನ್ನು ಜನರು ಮತ್ತು ಜಾನುವಾರುಗಳು ಸೇವಿಸಿದರೆ ಅದರಲ್ಲಿನ ಮೈಕೊಟಾಕ್ಸಿನ್ಸ್ ಅಂಶ ಗಂಭೀರ ಸ್ವರೂಪದ ಆರೋಗ್ಯ ಸಮಸ್ಯೆ ಉಂಟು ಮಾಡುತ್ತದೆ. ಈ ಅಪಾಯಕಾರಿ ಶಿಲೀಂಧ್ರ ದಿಂದಾಗಿಯೇ ವಿಶ್ವದ ವಿವಿಧ ದೇಶಗಳಲ್ಲಿನ ಕೃಷಿಕ್ಷೇತ್ರಕ್ಕೆ ನೂರಾರು ಕೋಟಿ ಡಾಲರ್ ನಷ್ಟವಾ ಗುತ್ತಿದೆ ಎಂಬ ಮಾಹಿತಿ ಇದೆ ಎಂದು ಮಿಚಿಗನ್ ಪೂರ್ವ ಜಿಲ್ಲೆಯ ಅಮೆರಿಕ ಸರಕಾರದ ಅಟಾರ್ನಿ ಜನರಲ್ ಜೆರೋಮ್ ಎಫ್.ಗೋರ್ಗನ್ ಜ್ಯೂನಿಯರ್ ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ. ಇಂಥದೊಂದು ಅಪಾಯಕಾರಿ ಶಿಲೀಂಧ್ರವನ್ನು ವಿದೇಶಿ ಮೂಲದ ಪ್ರಜೆಗಳು ಅಮೆರಿಕ ದೊಳಕ್ಕೆ ಕಳ್ಳ ಮಾರ್ಗದಲ್ಲಿ ತಂದಿರುವುದು ದೇಶದ ಭದ್ರತೆಗೇ ಕಂಟಕ ತರುವ ಪ್ರಯತ್ನವಾಗಿದೆ. ಪ್ರಕರಣ ಬಹಳ ಗಂಭೀರ ಸ್ವರೂಪದ್ದಾಗಿದೆ ಎಂದು ಅಟಾರ್ನಿ ಜನರಲ್ ಹೇಳಿದ್ದಾರೆ.

ಅಮೆರಿಕದಲ್ಲಿ ಚೀನಾದ ಕೃಷಿ ಭಯೋತ್ಪಾದನೆ

ೀಶ-ವಿದೇಶ

ಹೊಸ ದಿಗಂತ

U.A.S. UNIVERSITY LIBRARY BANGALORE



ಚೀನೀ ನಾಗರಿಕರ ಬಂಧನದಿಂದ ಬಯಲಾಯ್ತು ವಿಷಕಾರಿ ಶಿಲೀಂಧ್ರದ ಅಪಾಯ



ಭಾರತದ ಮೇಲೂ ನಡೆದಿತ್ತು ದಾಳಿ

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ(ಡಿಆರ್‌ಡಿಒ) ಪ್ರಕಾರ, 2016ರಲ್ಲಿ ಬಾಂಗ್ಲಾದೇಶದಲ್ಲಿ ಕಂಡುಬಂದಿದ್ದ ವಿಷಕಾರಿ ಶಿಲೀಂಧ್ರವು ಪುಟ್ಟಿಮ ಬಂಗಾಳದ ಎರಡು ಜಿಲ್ಲೆಗಳಲ್ಲಿ ಪತ್ತೆಯಾಗಿತ್ತು. ಹೀಗಾಗಿ ತಕ್ಷಣವೇ ಮೂರು ವರ್ಷಗಳವರೆಗೆ ಇವೆರಡೂ ಜಿಲ್ಲೆಗಳಲ್ಲಿ ಗೋಧಿ ಕೃಷಿಯನ್ನು ನಿಷೇಧಿಸುವುದರೊಂದಿಗೆ ಮಾರಕ ಪರಿಣಾಮ ಬೀರಬಹುದಾದ ಶಿಲೀಂಧ್ರವನ್ನು ಸರ್ಕಾರ ನಿಯಂತ್ರಿಸಿತ್ತು.

ಜಗತ್ತಿಗೆ ಕೃಷಿ ಭಯೋತ್ಪಾದನೆ ಭೀತಿ

ಏನಿದರ ಉದ್ದೇಶ?

ಕೃಷಿ ಭಯೋತ್ಪಾದನೆ ಮುಖ್ಯ ಉದ್ದೇಶ ಆರ್ಥಿಕತೆ ಹಾಳುಮಾಡುವುದು ಮತ್ತು ಸಮಾಜದಲ್ಲಿ ಉದ್ವಿಗ್ನತೆ ಸೃಷ್ಟಿಸುವುದು. ಅಮೆರಿಕದ ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್(ಎಫ್‌ಬಿಐ) ತಿಳಿಸಿರುವಂತೆ ಜೈವಿಕ ವಿಜೆಂಟರ ಗುರಿ ಆಹಾರ ಸರಪಳಿಗಳಿಗೆ ಹಾನಿ ಉಂಟು ಮಾಡಿ ಆರ್ಥಿಕತೆ ಮೇಲೆ ಗಂಭೀರ ಪರಿಣಾಮ ಬೀರಿ ಕೋಟ್ಯಂತರ ಮಂದಿಯ ಜೀವಕ್ಕೆ ಸಂಚಕಾರ ತರುವುದು. ಕೃಷಿ ಭಯೋತ್ಪಾದನೆ ಮೂಲಕ ಆರ್ಥಿಕ ಅಡಚಣೆ, ಆಹಾರದ ಕೊರತೆ ಅಥವಾ ಸಾಮಾಜಿಕ ಅಶಾಂತಿ ಉಂಟುಮಾಡುವ ಉದ್ದೇಶದಿಂದ ಕೀಟಗಳು, ರೋಗಗಳು ಅಥವಾ ರೋಗಕಾರಕಗಳನ್ನು ಉದ್ದೇಶಪೂರ್ವಕವಾಗಿ ದೇಶದ ಆಹಾರ ಪೂರೈಕೆ ಅಥವಾ ಕೃಷಿ ವಲಯಕ್ಕೆ ಪರಿಚಯಿಸುವುದಾಗಿದೆ.

ವಿಷಕಾರಿ ಶಿಲೀಂಧ್ರವನ್ನು ಅಮೆರಿಕಗೆ ಕಳ್ಳಸಾಗಣೆ ಮಾಡುವ ಮೂಲಕ ಅಲ್ಲಿನ ಕೃಷಿ ಭೂಮಿಗೆ ಸೋಂಕು ತಗುಲಿಸಲು ಪ್ರಯತ್ನಿಸಿದ ಆರೋಪದ ಮೇಲೆ ಇಬ್ಬರು ಚೀನೀ ನಾಗರಿಕರನ್ನು ಬಂಧಿಸಲಾಗಿದೆ. ಈ ಪ್ರಕರಣವೀಗ ಜಾಗತಿಕ ಕೃಷಿ ಭದ್ರತೆ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಮಾತ್ರವಲ್ಲದೆ, ಭವಿಷ್ಯದಲ್ಲಿ ಕೃಷಿ ಬಿತ್ತನೆ ಬೀಜಗಳು, ಮಣ್ಣು ಮತ್ತು ಬೆಳೆಗಳು ಸಹ ಭಯೋತ್ಪಾದನೆಯ ಆಯುಧಗಳಾಗಬಹುದೆಂಬ ಎಚ್ಚರಿಕೆ ನೀಡಿದೆ. ಇದರೊಂದಿಗೆ ಕೃಷಿ ಭೂಮಿಯನ್ನು ಯುದ್ಧಭೂಮಿಯಾಗಿ ಪರಿವರ್ತನೆಗೊಳಿಸುವ ಹುನ್ನಾರ ಅಡಗಿದೆಯೇ ಎಂಬ ಅನುಮಾನವನ್ನು ಸಹ ಸೃಷ್ಟಿಸಿದೆ.

ಬೆಳೆ, ಬೀಜ, ಮಣ್ಣು ಆಯುಧ

ಅಮೆರಿಕದಲ್ಲಿ ಇಬ್ಬರು ಚೀನೀ ನಾಗರಿಕರು ವಿಷಕಾರಿ ಶಿಲೀಂಧ್ರ ಫ್ಯುಸಾರಿಯಮ್ ಗ್ರಾಮಿನೇರಮ್ ಕಳ್ಳಸಾಗಣೆ ಮಾಡಿದ ಪ್ರಕರಣ ಜಾಗತಿಕ ಕೃಷಿ ಭದ್ರತೆಯ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಈ ಘಟನೆಯು ಭವಿಷ್ಯದಲ್ಲಿ ಕೃಷಿ ಬಿತ್ತನೆ ಬೀಜಗಳು, ಮಣ್ಣು ಮತ್ತು ಬೆಳೆಗಳು ಸಹ ಭಯೋತ್ಪಾದನೆಯ ಆಯುಧಗಳಾಗಬಹುದೆಂಬ ಎಚ್ಚರಿಕೆ ನೀಡಿದೆ. ಈ ಶಿಲೀಂಧ್ರವು ಧಾನ್ಯಗಳನ್ನು ಕೊಳೆಸುತ್ತದೆ. ಇದನ್ನು ಸೇವಿಸುವ ಮಾನವರು ಮತ್ತು ಪ್ರಾಣಿಗಳನ್ನು ಗಂಭೀರವಾಗಿ ಅಸ್ವಸ್ಥಗೊಳಿಸುತ್ತದೆ. ಇದರಿಂದಾಗಿ ಇದು ಜೈವಿಕ ಯುದ್ಧದ ಆಯುಧವೆಂದು ಸಾಬೀತುಪಡಿಸಬಹುದು. ಇದನ್ನು ಕೃಷಿ ಭಯೋತ್ಪಾದನೆಯ ಸಂಭಾವ್ಯ ಆಯುಧ ಎನ್ನಲಾಗಿದೆ. ಬೆಳೆಗಳನ್ನು ನಾಶಮಾಡಲು ಜೈವಿಕ ವಿಜೆಂಟ್‌ಗಳನ್ನು ಬಳಸುವುದನ್ನು ಕೃಷಿ ಭಯೋತ್ಪಾದನೆ ಎಂದು ಕರೆಯಲಾಗುತ್ತದೆ.

ಬೆಳೆಗಳೇ ಭಯೋತ್ಪಾದನೆ ಗುರಿ

ಕೃಷಿ ಭಯೋತ್ಪಾದನೆಯು ಸಾಂಪ್ರದಾಯಿಕ ಭಯೋತ್ಪಾದನೆಗಿಂತ ಭಿನ್ನವಾಗಿದ್ದು, ಅದರ ಗುರಿ ನಾಗರಿಕರಾಗಲಿ ಅಥವಾ ಮೂಲಸೌಕರ್ಯಗಳಾಗಲಿ ಅಲ್ಲ. ಬದಲಿಗೆ ಬೆಳೆಗಳು, ಜಾನುವಾರುಗಳು ಮತ್ತು ನಿರ್ಣಾಯಕ ಆಹಾರ ವ್ಯವಸ್ಥೆಗಳು. ಪೂರೈಕೆ ಸರಪಳಿಗಳ ಜಾಗತಿಕ ಪರಸ್ಪರ ಸಂಬಂಧವನ್ನು ಗಮನಿಸಿದರೆ, ಸ್ಥಳೀಯ ವಿಕಾಪಿಕ ಸಹ ಆರ್ಥಿಕತೆಗಳು ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಅಲೆಗಳ ಪರಿಣಾಮಗಳನ್ನು ಬೀರಬಹುದು.

ಮಾರಣಾಂತಿಕ ಫ್ಯುಸಾರಿಯಮ್ ಗ್ರಾಮಿನೇರಮ್ ಶಿಲೀಂಧ್ರ

ಫ್ಯುಸಾರಿಯಮ್ ಗ್ರಾಮಿನೇರಮ್ ಶಿಲೀಂಧ್ರ ಈ ಪ್ರಕರಣದ ಕೇಂದ್ರಬಿಂದು. ಇದು ಉತ್ತರ ಅಮೆರಿಕ, ಯುರೋಪ್ ಮತ್ತು ಏಷ್ಯಾದ ಕೆಲವು ಭಾಗಗಳಲ್ಲಿ ಈಗಾಗಲೇ ಬೆಳೆ-ಸೋಂಕುಕಾರಕ ಶಿಲೀಂಧ್ರವೆಂದು ಗುರುತಿಸಲ್ಪಟ್ಟಿದೆ. ಹೀಗಾಗಿ ಇದನ್ನು ಹೊಸ ಪ್ರದೇಶಗಳಿಗೆ ಅಥವಾ ಸಂಶೋಧನಾ ಪರಿಸರಗಳಿಗೆ ಪರಿಚಯಿಸುವುದಕ್ಕೆ ಅನುಮತಿಯಿಲ್ಲ. ಇದು ಹೆಚ್ಚು ಆಕ್ರಮಣಕಾರಿಯಾಗಿದ್ದು ಬೇರೆ ತಳಗಳಿಗೆ, ಪ್ರತಿರೋಧವಿಲ್ಲದ ದುರ್ಬಲ ಬೆಳೆ ವ್ಯವಸ್ಥೆಗಳಲ್ಲಿ ವಿಕಾಪಿಕ ಹರಡುವ ಅಪಾಯವಿದ್ದು, ಹೆಚ್ಚು ವಿನಾಶಕಾರಿ ಪರಿಣಾಮಗಳಿಗೆ ಕಾರಣವಾಗುತ್ತದೆ.


ಯಕೃತ್ತಿಗೆ ಹಾನಿ ಉಂಟುಮಾಡುವ ಸೋಂಕು

ಚೀನಾದ ಇಬ್ಬರು ಪ್ರಜೆಗಳಾದ ಯುನ್ಕಿಂಗ್ ಜಿಯಾನ್ (33) ಮತ್ತು ಜುನ್ಯೊಂಗ್ ಲಿಯು (34) ಅಮೆರಿಕಗೆ ಮಾರಕ ಶಿಲೀಂಧ್ರವನ್ನು ಕಳ್ಳಸಾಗಣೆ ಮಾಡಲು ಪ್ರಯತ್ನಿಸಿದ್ದಾರೆ ಎಂದು ಎಫ್‌ಬಿಐ ಆರೋಪಿಸಿದ್ದು, ಇದು ಕೃಷಿ ಭಯೋತ್ಪಾದನೆ ಸಂಭಾವ್ಯ ಆಯುಧ ಎಂದು ಹೇಳಿದೆ. ಈಗ, ಫ್ಯುಸಾರಿಯಮ್ ಗ್ರಾಮಿನೇರಮ್ ಎಂದು ಗುರುತಿಸಲಾದ ರೋಗಕಾರಕವು ಗೋಧಿ, ಬಾರ್ಲಿ, ಓಟ್ಸ್ ಮತ್ತು ಜೋಳದಂತಹ ಬೆಳೆಗಳಿಗೆ ಸೋಂಕು ತಗುಲಿಸಿ, ಕೊಳೆತವನ್ನು ಉಂಟುಮಾಡುತ್ತದೆ. ಇದು ಯಕೃತ್ತಿಗೆ ಹಾನಿಯನ್ನುಂಟು ಮಾಡುವ ಸಾಮರ್ಥ್ಯ ಹೊಂದಿದ್ದು ಮನುಷ್ಯರಿಗೂ ಅತ್ಯಂತ ಹಾನಿಕಾರಕವಾಗಿದೆ.

ಹಾನಿ ಹೇಗೆ ಮಾಡುತ್ತದೆ?

ಫ್ಯುಸಾರಿಯಮ್ ಗ್ರಾಮಿನೇರಮ್ ಸೋಂಕು ಮುಖ್ಯವಾಗಿ ಗೋಧಿ, ಬಾರ್ಲಿ, ಓಟ್ಸ್ ಮತ್ತು ಜೋಳದಂತಹ ವಿಕದಳ ಬೆಳೆಗಳ ಮೇಲೆ ಪರಿಣಾಮ ಬೀರುವ ಗಂಭೀರ ರೋಗ. ಶಿಲೀಂಧ್ರವು ಈ ಸಸ್ಯಗಳ ಹೂಬಿಡುವ ಭಾಗದ ಮೇಲೆ ದಾಳಿ ಮಾಡಿ ಧಾನ್ಯದ ಬೆಳವಣಿಗೆ ಕಡಿಮೆ ಮಾಡುತ್ತದೆ. ಇದರಿಂದ ಇಳುವರಿ ಗಮನಾರ್ಹವಾಗಿ ಕಡಿಮೆಯಾಗುತ್ತದೆ. ಆದರೆ ಶಿಲೀಂಧ್ರದ ಹಾನಿ ಅಲ್ಲಿಗೆ ನಿಲ್ಲುವುದಿಲ್ಲ; ಸೋಂಕಿತ ಧಾನ್ಯಗಳು ಹೆಚ್ಚಾಗಿ ಮೈಕೋಟಾಕ್ಸಿನ್‌ಗಳು ಎಂಬ ವಿಷಕಾರಿ ಸಂಯುಕ್ತಗಳಿಂದ ಕಲುಷಿತಗೊಳ್ಳುತ್ತವೆ, ವಿಶೇಷವಾಗಿ ಡಿಯೋಕ್ಸಿನಿವಾಲೆನಾಲ್ (ಡಿಒಎನ್), ಇದನ್ನು ವಾಮಿಟಾಕ್ಸಿನ್ ಎಂದೂ ಕರೆಯುತ್ತಾರೆ. ಈ ವಿಷ ಮನುಷ್ಯರು ಮತ್ತು ಪ್ರಾಣಿಗಳಿಗೆ ಹಾನಿಕಾರಕವಾಗಿದೆ.

2ನೇ ಯುದ್ಧದಲ್ಲೂ ಜೈವಿಕ ಅಸ್ತ್ರ ಬಳಕೆ




ಎರಡನೇ ಮಹಾಯುದ್ಧದ ಸಮಯದಲ್ಲಿ, ಜರ್ಮನಿಯು ಬ್ರಿಟನ್‌ನಲ್ಲಿನ ಆಲೂಗಡ್ಡೆ ಬೆಳೆಗಳನ್ನು ಹಾನಿ ಮಾಡಲು ಕೊಲೊರಾಡೋ ಆಲೂಗಡ್ಡೆ ಜೀರುಂಡೆಗಳನ್ನು ಬಳಸಿಕೊಂಡಿತ್ತು. ವಿಮಾನದಿಂದ ಬಿಡುಗಡೆ ಮಾಡಲಾದ ಈ ಜೀರುಂಡೆಗಳು 1943ರಲ್ಲಿ ಇಂಗ್ಲೆಂಡ್‌ನಲ್ಲಿ ಕಂಡುಬಂದಿದ್ದು ಸಣ್ಣ ಪ್ರಮಾಣದ ದಾಳಿ ನಡೆದಿರಬಹುದು ಎನ್ನಲಾಗಿದೆ. 1984ರಲ್ಲಿ ಅಮೆರಿಕದ ಒರೆಗಾನ್‌ನಲ್ಲಿನ ಧಾರ್ಮಿಕ ಪಂಥವು ಸ್ಥಳೀಯ ಚುನಾವಣೆಗಳ ಮೇಲೆ ಪ್ರಭಾವ ಬೀರಲು ಸಾಲ್ಮೊನೆಲ್ಲಾದಿಂದ ಸಲಾಡ್ ಬಾರ್‌ಗಳನ್ನು ಕಲುಷಿತಗೊಳಿಸಿದ್ದರಿಂದ 750 ಜನರು ಅಸ್ವಸ್ಥರಾಗಿದ್ದರು.

'ಕೃಷಿ ಸಂಕಲ್ಪ' ವಿಕಸಿತ ಭಾರತಕ್ಕೆ ಮತ್ತಷ್ಟು ಬಲ

ಭಾರತದ ಕೃಷಿ ಕ್ಷೇತ್ರವು ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ನಿರಂತರವಾಗಿ ಪ್ರಗತಿಯತ್ತ ಸಾಗುತ್ತಿದೆ. ರೈತರ ಕಲ್ಯಾಣಕ್ಕಾಗಿ ಅವರ ದೂರದೃಷ್ಟಿಯ ವಿಧಾನ ಮತ್ತು ಐತಿಹಾಸಿಕ ನಿರ್ಧಾರಗಳು ರೈತ ಬಂಧುಗಳಿಗೆ ಸಬಲೀಕರಣ ನೀಡಿವೆ ಹಾಗೂ 'ವಿಕಸಿತ ಭಾರತ'ದ ಮಹಾನ್ ಸಂಕಲ್ಪಕ್ಕೆ ಮತ್ತಷ್ಟು ಬಲ ನೀಡಿವೆ. ಇಂದು ಆಹಾರ ಉತ್ಪಾದಕರು ದೇಶದ ಆಹಾರ ಭದ್ರತೆಯನ್ನು ಖಚಿತಪಡಿಸುವುದಲ್ಲದೆ, ಹಲವು ರಾಷ್ಟ್ರಗಳಿಗೆ ಆಹಾರ ಧಾನ್ಯಗಳನ್ನು ರಫ್ತು ಮಾಡುವ ಮೂಲಕ ಭಾರತದ ಕೀರ್ತಿಯನ್ನು ಹೆಚ್ಚಿಸುತ್ತಿದ್ದಾರೆ. ರಾಜ್ಯಗಳ ಸಹಯೋಗದೊಂದಿಗೆ, 'ಒಂದು ರಾಷ್ಟ್ರ ಒಂದು ಕೃಷಿ ಒಂದು ತಂಡ' ಎಂಬ ಪರಿಕಲ್ಪನೆಯಡಿ ಕಾರ್ಯನಿರ್ವಹಿಸುವುದು ನಮ್ಮ ಧ್ಯೇಯವಾಗಿದೆ. ಕೃಷಿ ಸಂಶೋಧನೆಗಳು ಪ್ರಯೋಗಾಲಯಗಳಿಂದ ಸಮಯಕ್ಕೆ ಸರಿಯಾಗಿ ರೈತರ ಹೊಲಗಳಿಗೆ ತಲುಪುವಂತೆ ನೋಡಿಕೊಳ್ಳುವ ಮೂಲಕ ಕೃಷಿಯನ್ನು ಆಧುನೀಕರಿಸುವುದು ಹಾಗೂ ರೈತರು ಸ್ವಾವಲಂಬಿಗಳಾಗುವಂತೆ ಮಾಡುವುದು ನಮ್ಮ ಗುರಿಯಾಗಿದೆ.

ಕೃಷಿ ಮತ್ತು ರೈತರು ದೇಶದ ಸಮೃದ್ಧಿಗೆ ತಳಹದಿ. ಕೃಷಿ ವಿಜ್ಞಾನಿಗಳು ಹಲವು ಅಧ್ಯಯನಗಳನ್ನು ನಡೆಸಿ, ನೂತನ ತಂತ್ರಜ್ಞಾನಗಳು, ಸುಧಾರಿತ ಬೀಜಗಳು ಮತ್ತು ಗೊಬ್ಬರಗಳ ಮೂಲಕ ಕಡಿಮೆ ವೆಚ್ಚದಲ್ಲಿ ಹೆಚ್ಚು ಇಳುವರಿ ಪಡೆಯುವಂತೆ ಮಾಡುವುದರಲ್ಲಿ ನಿರತರಾಗಿದ್ದಾರೆ. ಅವರ ಈ ಸಂಶೋಧನೆಗಳು ನೈಜ ಸಮಯದಲ್ಲಿ ರೈತರನ್ನು ತಲುಪಬೇಕು ಮತ್ತು ಹವಾಮಾನ ಬದಲಾವಣೆಯ ಪರಿಣಾಮಗಳು, ಮಣ್ಣಿನ ಪೋಷಕಾಂಶಗಳು ಹಾಗೂ ಗೊಬ್ಬರಗಳ ಸರಿಯಾದ ಬಳಕೆಯಂತಹ ಅಂಶಗಳನ್ನು ಅವರು ಅರ್ಥಮಾಡಿಕೊಳ್ಳಲು ನೆರವಾಗಬೇಕು ಎಂಬ ಉದ್ದೇಶದಿಂದ, ಪ್ರಧಾನಿ ಮೋದಿ ಅವರ ನಾಯಕತ್ವದಲ್ಲಿ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯವು ಮೇ 29 ರಿಂದ ಜೂನ್ 12 ರವರೆಗೆ 'ವಿಕಸಿತ ಕೃಷಿ ಸಂಕಲ್ಪ ಅಭಿಯಾನ'ವನ್ನು ಪ್ರಾರಂಭಿಸಿದೆ.

ಈ ರಾಷ್ಟ್ರವ್ಯಾಪಿ ಅಭಿಯಾನದ ಮೂಲಕ, 700ಕ್ಕೂ



ಅಧಿಕ ಜಿಲ್ಲೆಗಳಲ್ಲಿನ 65,000ಕ್ಕೂ ಹೆಚ್ಚು ಗ್ರಾಮಗಳಿಗೆ 2,170 ವಿಜ್ಞಾನಿಗಳ ತಂಡಗಳು ಭೇಟಿ ನೀಡಲಿವೆ. ಈ ಕಾರ್ಯಕ್ರಮದಲ್ಲಿ ಸುಮಾರು 1.5 ಕೋಟಿ (15 ಮಿಲಿಯನ್) ರೈತರು ನೇರವಾಗಿ ಭಾಗವಹಿಸಲಿದ್ದಾರೆ.

ಈ ಅಭಿಯಾನ ಕೇವಲ ಒಂದು ಔಪಚಾರಿಕತೆಯಲ್ಲ, ಬದಲಿಗೆ ರೈತರ ಜೀವನದಲ್ಲಿ ಸಮೃದ್ಧಿಯನ್ನು ತರುವ ಧ್ಯೇಯವಾಗಿದೆ. ಭಾರತೀಯ ಕೃಷಿ ಸಂಶೋಧನಾ ಮಂಡಳಿ, ಕೃಷಿ ವಿಜ್ಞಾನ ಕೇಂದ್ರಗಳು, ರಾಜ್ಯ ಕೃಷಿ ಇಲಾಖೆಗಳು, ಕೃಷಿ ವಿಶ್ವವಿದ್ಯಾಲಯಗಳು ಮತ್ತು ನಾವೀನ್ಯತೆಗೆ ಸಂಬಂಧಿಸಿದ ಸಂಸ್ಥೆಗಳ ವಿಜ್ಞಾನಿಗಳು "ವಿಕಸಿತ ಕೃಷಿ ಮತ್ತು ಸಮೃದ್ಧ ರೈತರು" ಎಂಬ ಗುರಿಯತ್ತ ಒಂದೇ ತಂಡವಾಗಿ ಒಟ್ಟಾಗಿ ಕೆಲಸ ಮಾಡಲಿದ್ದಾರೆ. ಈ ಅಭಿಯಾನವು ಪ್ರಧಾನಮಂತ್ರಿಯವರ 'ಲ್ಯಾಬ್-ಟು-ಲ್ಯಾಂಡ್' (ಪ್ರಯೋಗಾಲಯದಿಂದ ಭೂಮಿಗೆ) ಮಂತ್ರವನ್ನು ಸಾಕಾರಗೊಳಿಸಿ, ರೈತರ ಭವಿಷ್ಯ ಮತ್ತು ಭಾರತೀಯ ಕೃಷಿಯ ಸ್ವರೂಪ ಎರಡನ್ನೂ ಬದಲಿಸಲಿದೆ.

ವಿಜ್ಞಾನಿಗಳು ಗ್ರಾಮಗಳಲ್ಲಿ ರೈತರೊಂದಿಗೆ ನೇರವಾಗಿ ಸಂವಾದ ನಡೆಸಲಿದ್ದಾರೆ. ಅವರು ತಮ್ಮ ಸಂಶೋಧನಾ ಫಲಿತಾಂಶಗಳನ್ನು ಹಂಚಿಕೊಳ್ಳುವುದರ ಜೊತೆಗೆ, ರೈತರ ವಾಸ್ತವ ಅನುಭವಗಳಿಂದ ಕಲಿಯುವ ಮೂಲಕ ಸಂಶೋಧನೆಯನ್ನು ಇನ್ನಷ್ಟು ಪ್ರಾಯೋಗಿಕಗೊಳಿಸಲಿದ್ದಾರೆ. ಈ ಅಭಿಯಾನದಿಂದ ರೈತರ ಅವಿರತ ಪರಿಶ್ರಮದಿಂದ ಪ್ರತಿ ಹೆಕ್ಟೇರ್‌ಗೆ ಒಂದು ಕ್ವಿಂಟಾಲ್‌ನಷ್ಟು ಉತ್ಪಾದಕತೆ ಹೆಚ್ಚಾದರೂ ಸಹ, ಇದು ದೇಶಾದ್ಯಂತ ಹೆಚ್ಚುವರಿ 20 ಮಿಲಿಯನ್ ಟನ್‌ಗಳಷ್ಟು ಆಹಾರ ಉತ್ಪಾದನೆಯನ್ನು ವೃದ್ಧಿಸಲಿದೆ.

ಕಳೆದ 11 ವರ್ಷಗಳಲ್ಲಿ, ಸರ್ಕಾರವು ರೈತರ ಸಬಲೀಕರಣಕ್ಕಾಗಿ ಬೀಜದಿಂದ ಹಿಡಿದು ಮಾರುಕಟ್ಟೆಯವರೆಗೆ ಹಲವು ನಿರ್ಧಾರಗಳನ್ನು ಕೈಗೊಂಡು ಕೃಷಿಯನ್ನು ಸುಲಭಗೊಳಿಸಿದೆ. ಕನಿಷ್ಠ ಬೆಂಬಲ ಬೆಲೆಯಲ್ಲಿನ ಖರೀದಿ, ಈರುಳ್ಳಿ ಮತ್ತು ಆಕ್ಟಿಯ ರಫ್ತು ಸುಂಕಗಳ ರದ್ದತಿ, ಹವಾಮಾನ-ನಿರೋಧಕ ಮತ್ತು ಅಧಿಕ ಇಳುವರಿ ನೀಡುವ ಬೆಳೆ ತಳಿಗಳ ಅಭಿವೃದ್ಧಿ, ಹಾಗೂ ರೈತ-ಸ್ನೇಹಿ ಯೋಜನೆಗಳ ವಿಸ್ತರಣೆಯಂತಹ ಇತ್ತೀಚಿನ ಉಪಕ್ರಮಗಳೆಲ್ಲವೂ ರೈತರ ಕಲ್ಯಾಣಕ್ಕಾಗಿ ಮೋದಿ ಸರ್ಕಾರದ ಬದ್ಧತೆಯನ್ನು ಪ್ರತಿಬಿಂಬಿಸಿವೆ.

ಭಾರತವು ಇತ್ತೀಚೆಗೆ ಜಪಾನ್ ಅನ್ನು ಹಿಂದಿಕ್ಕಿ ವಿಶ್ವದ ನಾಲ್ಕನೇ ಅತಿ ದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿದೆ. ಕೃಷಿ ಉತ್ಪಾದನೆಯಲ್ಲಿ ಐತಿಹಾಸಿಕ ಬೆಳವಣಿಗೆ ಕಂಡುಬಂದಿದ್ದು, 2024-25ರಲ್ಲಿ ಆಹಾರ ಧಾನ್ಯಗಳ ಉತ್ಪಾದನೆ 330.9 ಮಿಲಿಯನ್ ಟನ್ ಗಳನ್ನು ತಲುಪುವ ನಿರೀಕ್ಷೆಯಿದೆ.

ಒಂದು ಸಮಗ್ರ ದೃಷ್ಟಿಕೋನ, ಸಂಯೋಜಿತ ಕಾರ್ಯವಿಧಾನ, ಸ್ಪಷ್ಟ ನೀತಿಗಳು ಮತ್ತು ಪ್ರಾಮಾಣಿಕ ಉದ್ದೇಶಗಳೊಂದಿಗೆ, ಕೇಂದ್ರ ಸರ್ಕಾರವು ರೈತರ ಆದಾಯವನ್ನು ಹೆಚ್ಚಿಸಲು, ಅವರ ಶ್ರಮಕ್ಕೆ ನ್ಯಾಯಯುತ ಮೌಲ್ಯವನ್ನು ಖಚಿತಪಡಿಸಲು ಮತ್ತು ಅವರನ್ನು ಸ್ವಾವಲಂಬಿಗಳನ್ನಾಗಿಸಲು ಆರು ಅಂಶಗಳ ಕಾರ್ಯತಂತ್ರವನ್ನು ರೂಪಿಸಿದೆ. ಇದು ಉತ್ಪಾದನೆಯನ್ನು ವೃದ್ಧಿಸುವುದು, ವೆಚ್ಚಗಳನ್ನು ತಗ್ಗಿಸುವುದು, ನ್ಯಾಯಯುತ ಬೆಲೆಗಳನ್ನು ಖಾತರಿಪಡಿಸುವುದು, ಸೂಕ್ತ ವಿಪತ್ತು ಪರಿಹಾರವನ್ನು ಒದಗಿಸುವುದು, ಬೆಳೆ ವೈವಿಧ್ಯೀಕರಣವನ್ನು ಪ್ರೋತ್ಸಾಹಿಸುವುದು ಮತ್ತು ನೈಸರ್ಗಿಕ ಕೃಷಿಯನ್ನು ಉತ್ತೇಜಿಸುವುದನ್ನು ಒಳಗೊಂಡಿದೆ. ವಿಜ್ಞಾನಿಗಳು ನೀಡುವ ಸಲಹೆಗಳನ್ನು ಪಾಲಿಸುವ ಮೂಲಕ, ಕೃಷಿ ಪದ್ಧತಿಗಳನ್ನು ಆಧುನೀಕರಿಸಬಹುದು ಮತ್ತು ಇಳುವರಿಯನ್ನು ಹೆಚ್ಚಿಸಿಕೊಳ್ಳಬಹುದು. ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ, ವೆಚ್ಚಗಳನ್ನು ಕಡಿಮೆ ಮಾಡುವ ಮತ್ತು ರೈತರ ಲಾಭವನ್ನು ಗರಿಷ್ಠಗೊಳಿಸುವ ಗುರಿಯೊಂದಿಗೆ, ಈ ಧ್ಯೇಯವು ವಿಕಸಿತ ಭಾರತದ ಅಡಿಪಾಯವಾಗಲಿದೆ.

Samyuktha Karnataka Pg.08